ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ಅಂಗವಿಕಲರ ಪೋಷಣಾ ಭತ್ಯೆ

88 (566) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ 2009–10, 2010–11ನೇ ಸಾಲಿನಲ್ಲಿ ವಿಧಾನಸಭಾ ಮತ ಕ್ಷೇತ್ರವಾರು ಸಂಧ್ಯಾ ಸುರಕ್ಷಾ, ವಿಧವಾ ವೇತನ ಹಾಗೂ ಅಂಗವಿಕಲರ ಪೋಷಣಾ ಭತ್ಯೆಗಳ ಮಂಜೂರಾತಿಗಾಗಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಮಂಜೂರಾದ ಫಲಾನುಭವಿಗಳ ಸಂಖ್ಯೆ ಹಾಗೂ ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿ ನೀಡುವುದು)

ಆ) ಮಂಜೂರಾದ ಎಷ್ಟು ಫಲಾನುಭವಿಗಳಿಗೆ ಮಾಸಾಶನ ನೀಡಲಾಗುತ್ತಿದೆ;

ಇ) ಮಂಜೂರಾಗಿ ಮಾಸಾಶನ ನೀಡದೇ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಈ) ಸದರಿ ಮಾಸಾಶನಗಳ ಮಂಜೂರಾತಿಗಿರುವ ಮಾನದಂಡಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ವಿಜಾಪುರ ಜಿಲ್ಲೆಯಲ್ಲಿ 2009–10, 2010–11ನೇ ಸಾಲಿನಲ್ಲಿ ಸಂಧ್ಯಾ ಸುರಕ್ಷಾ, ವಿಧವಾ ವೇತನ ಹಾಗೂ ಅಂಗವಿಕಲರ ವೇತನದಡಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ, ಮಂಜೂರಾದ ಫಲಾನುಭವಿಗಳ ಸಂಖ್ಯೆ ಹಾಗೂ ಬಾಕಿ ಇರುವ ಅರ್ಜಿಗಳ ಸಂಖ್ಯೆಯನ್ನು ವಿಧಾನಸಭಾ ಮತ ಕ್ಷೇತ್ರವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಮಂಜೂರಾದ ಎಲ್ಲಾ ಫಲಾನುಭವಿಗಳಿಗೆ ಮಾಸಾಶನ ನೀಡಲಾಗುತ್ತಿದೆ.

ಇ) ಯಾವುದೇ ಪ್ರಕರಣಗಳು ಇರುವುದಿಲ್ಲ.

ಈ) ಸಂಧ್ಯಾ ಸುರಕ್ಷಾ ಯೋಜನೆಗೆ ಹೊಂದಿರಬೇಕಾದ ಅರ್ಹತೆಗಳು ಈ ಕೆಳಕಂಡಂತಿರುತ್ತವೆ.

1. ಆಕೆ/ಆತ 65 ವರ್ಷ ಅಥವಾ ಮೇಲ್ಪಟ್ಟ ವಯಸ್ಸಿನವರಾಗಿರಬೇಕು.

2. ಪತಿ/ಪತ್ನಿಯ ಸಂಯೋಜಿತ ವಾರ್ಷಿಕ ಆದಾಯ ರೂ. 20,000/–ಕ್ಕಿಂತ ಹೆಚ್ಚಿಗೆ ಇರಕೂಡದು.

3. ಫಲಾನುಭವಿಗಳು ಪತಿ ಅಥವಾ ಪತ್ನಿಯ ಸಂಯೋಜಿತ ಠೇವಣಿ ಮೌಲ್ಯ ರೂ. 10,000ಕ್ಕಿಂತ ಹೆಚ್ಚಿಗೆ ಇರಬಾರದು.

4. ಯಾವುದೇ ರೀತಿಯ ಪಿಂಚಣಿಯನ್ನು ಸಾರ್ವಜನಿಕ/ಖಾಸಗಿ ಮೂಲದಿಂದ ಪಡೆಯುತ್ತಿರಬಾರದು.

5. ಫಲಾನುಭವಿಗಳಿಗೆ ಗಂಡು ಮಕ್ಕಳು ಇದ್ದರೂ ಸಹ ಇವರುಗಳು ಫಲಾನುಭವಿಗಳನ್ನು ಪೋಷಿಸದೆ ಇದ್ದಲ್ಲಿ ಈ ಯೋಜನೆಯಡಿ ಮಾಸಾಶನಕ್ಕೆ ಅರ್ಹರಾಗಿರುತ್ತಾರೆ.

6. ಜನನ ಪ್ರಮಾಣ ಪತ್ರ, ವೈದ್ಯಕೀಯ ದೃಢೀಕರಣ ಪತ್ರ ಅಥವಾ ಭಾರತ ಚುನಾವಣಾ ಆಯೋಗವು ನೀಡಿರುವ ಮತದಾರರ ಗುರುತಿನ ಚೀಟಿಯಲ್ಲಿರುವ ಜನ್ಮ ದಿನಾಂಕವು ವಯಸ್ಸಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ.

ನಿರ್ಗತಿಕ ವಿಧವಾ ವೇತನ ಯೋಜನೆ: ಹದಿನೆಂಟು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಾಗೂ ಕಾನೂನು ರೀತ್ಯಾ ಪತಿ ಮೃತಪಟ್ಟಿರುವ ನಿರ್ಗತಿಕ ವಿಧವೆಯರಿಗೆ ತಿಂಗಳಿಗೆ ರೂ. 400/–ಗಳ ಮಾಸಾಶನವನ್ನು ನೀಡಲಾಗುವುದು. ಮಾಸಾಶನವನ್ನು ಮೃತರಾಗುವವರೆಗೆ ಅಥವಾ ಪುನರ್ವಿವಾಹವಾಗುವವರೆಗೆ ಅಥವಾ ಉದ್ಯೋಗ ಪಡೆದು ವಾರ್ಷಿಕ ಆದಾಯ ರೂ. 6000ಕ್ಕಿಂತ ಹೆಚ್ಚಿಗೆ ಪಡೆಯುವವರೆಗೆ ನೀಡಲಾಗುವುದು.

ಅಂಗವಿಕಲರ ಮಾಸಾಶನ ಯೋಜನೆ: ಶೇಕಡಾ 40%ಕ್ಕಿಂತ ಮೇಲ್ಪಟ್ಟ ಕೆಳಕಂಡ ಅಂಗವಿಕಲತೆ ಹೊಂದಿರುವ ಅಂಗವಿಕಲರಿಗೆ ತಿಂಗಳಿಗೆ ರೂ. 400/– ಹಾಗೂ ಶೇಕಡಾ 75%ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರೂ. 1000/– ಮಾಸಿಕ ವೇತನ ನೀಡಲಾಗುವುದು.

ಅ) ಅಂಧತ್ವ/ಮಂದದೃಷ್ಟಿ
ಆ) ಕುಷ್ಠರೋಗ
ಇ) ಶ್ರವಣದೋಷವುಳ್ಳವರು
ಈ) ಚಲನವಲನ ಅಂಗವಿಕಲತೆ
ಉ) ಬುದ್ಧಿಮಾಂದ್ಯತೆ
ಊ) ಮಾನಸಿಕ ಅಸ್ವಸ್ಥತೆ

ಶೇಕಡಾ 40%ಕ್ಕಿಂತ ಮೇಲ್ಪಟ್ಟ ಅಂಗವಿಕಲತೆ ಹೊಂದಿರುವ ಅಂಗವಿಕಲರಿಗೆ ನೀಡುವ ಮಾಸಾಶನದ ಮೊತ್ತ ತಿಂಗಳಿಗೆ ರೂ. 400/– ಹಾಗೂ 2008–09ನೇ ಸಾಲಿನಿಂದ ಶೇಕಡಾ 75%ರಷ್ಟು ಹಾಗೂ ಅದಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ವ್ಯಕ್ತಿಗಳು ವೈದ್ಯಕೀಯ ಮಂಡಳಿಯಿಂದ ದೃಢೀಕರಣ ಪತ್ರವನ್ನು ಪಡೆದಿದ್ದರೆ, ಸದರಿ ಪ್ರಮಾಣ ಪತ್ರದ ಆಧಾರದ ಮೇಲೆ ರೂ. 1000/– ಮಾಸಿಕ ವೇತನ ನೀಡಲಾಗುವುದು.

ಅನುಬಂಧ

ಕ್ರ.ಸಂ.	ಮತಕ್ಷೇತ್ರ	ವರ್ಷ	ಯೋಜನೆಯ ಹೆಸರು	ಸ್ವೀಕರಿಸಿದ ಅರ್ಜಿಗಳ ಸಂಖ್ಯೆ	ಮಂಜೂರಾದ ಫಲಾನುಭವಿಗಳ ಸಂಖ್ಯೆ	ಬಾಕಿ ಅರ್ಜಿಗಳ ಸಂಖ್ಯೆ
1	**2**	**3**	**4**	**5**	**6**	**7**
1	ವಿಜಾಪುರ	2009–10	ಸಂಧ್ಯಾ ಸುರಕ್ಷಾ	2322	625	75
			ವಿಧವಾ ವೇತನ	1422	426	42
			ಅಂಗವಿಕಲ ವೇತನ	640	225	32
			ಒಟ್ಟು	**4384**	**1276**	**149**
		2010–11	ಸಂಧ್ಯಾ ಸುರಕ್ಷಾ	1060	304	62
			ವಿಧವಾ ವೇತನ	432	228	20
			ಅಂಗವಿಕಲ ವೇತನ	346	211	15
			ಒಟ್ಟು	**1838**	**743**	**97**

1	2	3	4	5	6	7
2	ಬಬಲೇಶ್ವರ	2009–10	ಸಂಧ್ಯಾ ಸುರಕ್ಷಾ	554	102	23
			ವಿಧವಾ ವೇತನ	411	163	19
			ಅಂಗವಿಕಲ ವೇತನ	135	112	14
			ಒಟ್ಟು	1100	377	56
		2010–11	ಸಂಧ್ಯಾ ಸುರಕ್ಷಾ	538	149	32
			ವಿಧವಾ ವೇತನ	158	70	12
			ಅಂಗವಿಕಲ ವೇತನ	88	81	6
			ಒಟ್ಟು	**784**	**300**	**50**
3	ಬಾಗೇವಾಡಿ	2009–10	ಸಂಧ್ಯಾ ಸುರಕ್ಷಾ	702	510	0
			ವಿಧವಾ ವೇತನ	246	201	0
			ಅಂಗವಿಕಲ ವೇತನ	114	111	0
			ಒಟ್ಟು	**1062**	**822**	**0**

1	2	3	4	5	6	7
		2010–11	ಸಂಧ್ಯಾ ಸುರಕ್ಷಾ	1638	1193	25
			ವಿಧವಾ ವೇತನ	575	471	0
			ಅಂಗವಿಕಲ ವೇತನ	266	260	0
			ಒಟ್ಟು	**2479**	**1924**	**25**
4	ದೇವರ ಹಿಪ್ಪರಗಿ	2009–10	ಸಂಧ್ಯಾ ಸುರಕ್ಷಾ	2064	1719	0
			ವಿಧವಾ ವೇತನ	427	322	17
			ಅಂಗವಿಕಲ ವೇತನ	231	186	5
			ಒಟ್ಟು	**2722**	**2227**	**22**
		2010–11	ಸಂಧ್ಯಾ ಸುರಕ್ಷಾ	1709	1275	29
			ವಿಧವಾ ವೇತನ	556	435	13
			ಅಂಗವಿಕಲ ವೇತನ	333	222	26
			ಒಟ್ಟು	**2618**	**1932**	**68**

1	2	3	4	5	6	7
5	ಮುದ್ದೇಬಿಹಾಳ	2009–10	ಸಂಧ್ಯಾ ಸುರಕ್ಷಾ	2310	1449	267
			ವಿಧವಾ ವೇತನ	894	603	21
			ಅಂಗವಿಕಲ ವೇತನ	460	282	167
			ಒಟ್ಟು	**3664**	**2334**	**458**
		2010–11	ಸಂಧ್ಯಾ ಸುರಕ್ಷಾ	2635	1081	221
			ವಿಧವಾ ವೇತನ	633	329	90
			ಅಂಗವಿಕಲ ವೇತನ	368	232	59
			ಒಟ್ಟು	**3636**	**1642**	**370**
6	ಸಿಂಧಗಿ	2009–10	ಸಂಧ್ಯಾ ಸುರಕ್ಷಾ	420	3104	0
			ವಿಧವಾ ವೇತನ	873	690	0
			ಅಂಗವಿಕಲ ವೇತನ	505	372	1
			ಒಟ್ಟು	**1798**	**4166**	**1**

1	2	3	4	5	6	7
		2010–11	ಸಂಧ್ಯಾ ಸುರಕ್ಷಾ	3129	2518	83
			ವಿಧವಾ ವೇತನ	649	448	8
			ಅಂಗವಿಕಲ ವೇತನ	330	215	5
			ಒಟ್ಟು	**4108**	**3181**	**96**
7	ಇಂಡಿ	2009–10	ಸಂಧ್ಯಾ ಸುರಕ್ಷಾ	1022	705	30
			ವಿಧವಾ ವೇತನ	667	287	37
			ಅಂಗವಿಕಲ ವೇತನ	662	399	3
			ಒಟ್ಟು	**2351**	**1391**	**70**
		2010–11	ಸಂಧ್ಯಾ ಸುರಕ್ಷಾ	682	590	4
			ವಿಧವಾ ವೇತನ	105	55	5
			ಅಂಗವಿಕಲ ವೇತನ	77	38	4
			ಒಟ್ಟು	**864**	**683**	**13**

1	2	3	4	5	6	7
8	ನಾಗಠಾಣ	2009–10	ಸಂಧ್ಯಾ ಸುರಕ್ಷಾ	710	528	35
			ವಿಧವಾ ವೇತನ	98	58	10
			ಅಂಗವಿಕಲ ವೇತನ	110	95	5
			ಒಟ್ಟು	**918**	**681**	**50**
		2010–11	ಸಂಧ್ಯಾ ಸುರಕ್ಷಾ	968	868	10
			ವಿಧವಾ ವೇತನ	101	61	5
			ಅಂಗವಿಕಲ ವೇತನ	175	150	5
			ಒಟ್ಟು	**1244**	**1079**	**20**
			ಒಟ್ಟು ಮೊತ್ತ	**35570**	**24758**	**1542**

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಈಗ ಅವರ ಗಮನಕ್ಕೆ ತರುವುದೇನೆಂದರೆ, ನಾವು ಸಾಕಷ್ಟು ಹಳ್ಳಿಗಳಿಗೆ ಹೋಗುತ್ತೇವೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಸುಮಾರು 100 ರಿಂದ 200 ಜನ ನಮ್ಮ ಹತ್ತಿರ ಬಂದು ನಮಗೂ ಕೂಡ ಸಂಧ್ಯಾ ಸುರಕ್ಷಾ ಮಾಡಿಸಿಕೊಡಿ ಎಂದು ನಿರ್ಗತಿಕರು, ಅಸಹಾಯಕರು ಬಂದು ಕೇಳುತ್ತಾರೆ. ನಿಜವಾಗಿಯೂ ಕೂಡ ಇವರೆಲ್ಲರೂ ಅರ್ಹ ಫಲಾನುಭವಿಗಳಾಗಿರುತ್ತಾರೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಗೂಡಿಹಾಳ್ ಎಂಬ ಗ್ರಾಮದಲ್ಲಿ ಕಳೆದ 6 ತಿಂಗಳ ಹಿಂದೆಯೇ sanction ಆಗಿದೆ. ಆದರೆ, ಅವರುಗಳು treasuryಗೆ ಹೋದರೆ ಅಲ್ಲಿ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿಯಾದ 20 ಅರ್ಜಿಗಳು ನಮ್ಮ ಮುಂದೆ ಇವೆ. ಇದಕ್ಕೆ ಸಂಬಂಧಪಟ್ಟ ಫೈಲ್ ಅನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸುತ್ತೇನೆ. ಸಂಧ್ಯಾ ಸುರಕ್ಷಾ ಯೋಜನೆಯನ್ನು ಎಲ್ಲಾ ಕಡೆ ಕೊಡುತ್ತೇವೆಂದು ಪ್ರಚಾರ ತೆಗೆದುಕೊಳ್ಳುತ್ತಿದ್ದೀರಿ. ಆದರೆ, ಈ ರೀತಿಯಾಗಿ ದುಡ್ಡಿಲ್ಲದೆ ಕೊಟ್ಟರೆ ಹೇಗೆ? ಮಾನ್ಯ ಸಣ್ಣ ನೀರಾವರಿ ಸಚಿವರಾಗಿರುವ ಶ್ರೀ ಗೋವಿಂದ ಕಾರಜೋಳರವರ ಊರ ಪಕ್ಕದಲ್ಲಿರುವ ಗೂಡಿಹಾಳ್ ಗ್ರಾಮದಲ್ಲಿ ಸುಮಾರು 20 ಜನ ಫಲಾನುಭವಿಗಳಿಗೆ 6 ತಿಂಗಳ ಹಿಂದೆಯೇ sanction ಆಗಿದೆ. ಆದರೆ, treasuryಗೆ ಹೋದರೆ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಈ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ವಿಚಾರದ ಬಗ್ಗೆ ತಕ್ಷಣವೇ ಸೂಚನೆ ಕೊಟ್ಟು ಅವರಿಗೆ ಮಾಸಾಶನ ಕೊಡಿಸುವಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ.ಬಿ.ಪಾಟೀಲ್: ಎಲ್ಲಾ ಕಡೆ ಇದೇ ಪರಿಸ್ಥಿತಿ ಇದೆ.

ಶ್ರೀ ಜಿ.ಕರುಣಾಕರ ರೆಡ್ಡಿ: ಈ ರೀತಿಯಾಗಿ ರಾಜ್ಯದಲ್ಲಿ ಎಲ್ಲಿಯೇ ಆಗಿರಲಿ, ಇದರ ಬಗ್ಗೆ ಕಟ್ಟುನಿಟ್ಟಿನ ಸೂಚನೆ ಕೊಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಅಧ್ಯಕ್ಷರೆ, ಇದು ಎಲ್ಲಾ ಕಡೆ ವ್ಯಾಪಕವಾಗಿದೆ.

ಅಧ್ಯಕ್ಷರು: ಆ ರೀತಿಯಾಗಿ ಎಲ್ಲಿಯಾದರು ಆಗಿದ್ದರೆ ಅಲ್ಲೆಲ್ಲ ಕೊಡಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಸಭಾಧ್ಯಕ್ಷರೆ, ಈಗ ಏನಾಗಿದೆ ಎಂದರೆ, ಜನಸ್ಪಂದನ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲರ ಮಾಶಾಸನ ಕಾರ್ಯಕ್ರಮಗಳು ಮುಖ್ಯವಾಗಿರುತ್ತವೆ. ಬೇರೆ ಏನೂ ಕಾರ್ಯಕ್ರಮಗಳು ಅಲ್ಲಿರುವುದಿಲ್ಲ.

ಅಧ್ಯಕ್ಷರು: ಎಲ್ಲೆಲ್ಲಿ ನೂನ್ಯತೆಗಳಿವೆಯೋ ಅಂಥ ಕಡೆ ಸರಿ ಪಡಿಸಲಾಗುವುದೆಂದು ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ನಾಲ್ಕೈದು ತಿಂಗಳು ಬಿಟ್ಟು ಹೋದರೂ ಕೂಡ ಅವರಿಗೆ ಆ ಪಟ್ಟಿ ಇನ್ನು ಮುಟ್ಟಿರುವುದಿಲ್ಲ. ನಾವು ಪ್ರಮಾಣ ಪತ್ರ ಕೊಟ್ಟು ಆರು ತಿಂಗಳಾದರೂ ಸಹ ಕೊಡಲಿಲ್ಲವೆಂದರೆ ಹೇಗೆ? ಆದ್ದರಿಂದ, ಸರ್ಕಾರದ ಕಡೆಯಿಂದ ಅಧಿಕಾರಿಗಳಿಗೆ ಸ್ವಲ್ಪ ಚುರುಕು ಮುಟ್ಟಿಸುವಂಥ ಕೆಲಸ ಆಗಬೇಕು.

ಶ್ರೀ ಜಿ.ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಬಹಳ ಸೀರಿಯಸ್ ಆಗಿ ಇದನ್ನು ಸರಿಪಡಿಸಿ ಅವರೆಲ್ಲರಿಗೂ ಕೊಡಿಸುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಆ ಇಲಾಖೆಯಲ್ಲಿ ಏಜೆಂಟರ ಹಾವಳಿ ಕೂಡ ಜಾಸ್ತಿಯಾಗಿದೆ. ನಿಜವಾದ ಫಲಾನುಭವಿಗಳಿಗೆ ಮತ್ತು ನಿರ್ಗತಿಕರಿಗೆ ಇದರ ಸಹಾಯವಾಗುತ್ತಿಲ್ಲ. ತಾವು ಯಾವುದಾದರು ಜಿಲ್ಲೆ ಅಥವಾ ಹಳ್ಳಿಗೆ ಪ್ರವಾಸ ಮಾಡಿ ನೋಡಿ ಪ್ರತಿಯೊಂದು ಊರಿನಲ್ಲಿ ಇವತ್ತೂ ಕೂಡ 80–90 ವರ್ಷ ವಯಸ್ಸಾಗಿರುವಂಥ ವೃದ್ದರು ಮತ್ತು ವೃದ್ದೆಯರು ಬಂದು ನಮಗೂ ಕೂಡ ಪೆನ್ಷನ್ ಕೊಡಿಸಿ ಎಂದು ಬರುತ್ತಾರೆ. ಇದು ಸರಿಯಾಗಿ ಆಗುತ್ತಿಲ್ಲ. ನಾನು ಹೇಳುವುದೇನೆಂದರೆ, ಯಾರು ಅರ್ಹರಾಗಿರುತ್ತಾರೆಯೋ ಅವರೆಲ್ಲರನ್ನು ಕೂಡ ಇದರಲ್ಲಿ ಸೇರಿಸಿಕೊಂಡು ಎಲ್ಲರಿಗೂ ಇದು ಸಿಗುವಂಥ ವ್ಯವಸ್ಥೆ ಆಗಬೇಕು.

ಶ್ರೀ ಜಿ.ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಸರಿಯಾಗಿ ಆಗಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದೇನೆಂದರೆ, ನಮ್ಮ ಸರ್ಕಾರ ಬಂದ ಮೇಲೆ, ಈ ಎರಡೂಮುಕ್ಕಾಲು ವರ್ಷಗಳಲ್ಲಿ ಸಂಧ್ಯಾ ಸುರಕ್ಷಾ ಅಡಿಯಲ್ಲಿ 13,95,437 ಮಂದಿ ಫಲಾನುಭವಿಗಳಿಗೆ ಇದರ ಫಲವನ್ನು ಕೊಡುತ್ತಿದ್ದೇವೆ. ಕೆಲವು ಕಡೆ ಅಲ್ಪಸ್ವಲ್ಪ ಲೋಪದೋಷಗಳು ಇರಬಹುದು. ತಾವು ಈಗ ನನ್ನ ಗಮನಕ್ಕೆ ಸಮಸ್ಯೆಯನ್ನು ತಂದಿದ್ದೀರಿ. ಆದ್ದರಿಂದ, ರಾಜ್ಯಾದ್ಯಂತ ಎಲ್ಲಾ ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್‌ಗಳಿಗೆ ಸೂಚನೆ ಕೊಟ್ಟು

ಇದನ್ನು ಬೇಗನೆ ಸರಿಪಡಿಸಿ ಯಾರು ಅರ್ಹ ಇದ್ದಾರೆಯೋ ಅವರಿಗೆ ಕೊಡಿಸುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಬಲೇಶ್ವರದಲ್ಲಿ ಜನ ಸ್ಪಂದನ ಕಾರ್ಯಕ್ರಮವಾಯಿತು.

ಅಧ್ಯಕ್ಷರು: ಮುಂದಿನ ಪ್ರಶ್ನೆ ಶ್ರೀ ಎ.ಎಸ್.ಪಾಟೀಲ್‌ರವರದು, ಈಗಾಗಲೇ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಈಗ ಮುಂದಿನ ಪ್ರಶ್ನೆಗೆ ಮಾನ್ಯ ಎ.ಎಸ್. ಪಾಟೀಲ್‌ರವರನ್ನು ಕರೆದಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ.ಬಿ.ಪಾಟೀಲ್: ಎರಡೂವರೆ ವರ್ಷಗಳ ಹಿಂದೆ ಜನಸ್ಪಂದನ ಕಾರ್ಯಕ್ರಮವಾಗಿದೆ.

ಅಧ್ಯಕ್ಷರು: ಎಲ್ಲೆಲ್ಲಿ ನೂನ್ಯತೆಗಳಿವೆಯೋ ಅವೆಲ್ಲವನ್ನು ಸರಿಪಡಿಸುತ್ತೇನೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ.ಬಿ.ಪಾಟೀಲ್: ಈ ರೀತಿಯಾಗಿ ಅಲ್ಲಿ ಸಿಕ್ಕಾಪಟ್ಟೆ ಇವೆ. ಅಂದರೆ, ಸಾವಿರಾರು ಅರ್ಜಿಗಳು ಇದೇ ರೀತಿಯಾಗಿವೆ. ಮಾನ್ಯ ಗೋವಿಂದ ಕಾರಜೋಳರವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ಅಲ್ಲಿ ಜನಸ್ಪಂದನಾ ಕಾರ್ಯಕ್ರಮವಾಗಿದೆ.

ಅಧ್ಯಕ್ಷರು: ಮಾನ್ಯ ಸಚಿವರ ಗಮನಕ್ಕೆ ತೆಗೆದುಕೊಂಡು ಬನ್ನಿ. ಸಿಕ್ಕಾಪಟ್ಟೆ ಇದ್ದರೆ ಅದರ ಎಲ್ಲಾ ವಿವರಗಳನ್ನು ಕೊಡಿ.

ಶ್ರೀ ಎಂ.ಬಿ.ಪಾಟೀಲ್: ಅದನ್ನೆ ಹೇಳಿದ್ದೇನೆ.

ಅಧ್ಯಕ್ಷರು: ವಿವರಗಳನ್ನು ಕೊಡಿ. ಈ ತರಹ ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ಬಿ.ಪಾಟೀಲ್: ಇದು ಕೇವಲ ಭರವಸೆ ಮಾತ್ರ ಆಗುತ್ತದಷ್ಟೆ.

ಶ್ರೀ ಎನ್.ಸಂಪಂಗಿ: ಪ್ರಶ್ನೆಗಳನ್ನು ಕೇಳದೆ ನಾವುಗಳು ಸುಮ್ಮನೆ ಕುಳಿತುಕೊಳ್ಳಬೇಕೆ?

ಅಧ್ಯಕ್ಷರು: ದಯವಿಟ್ಟು ನೀವು ಕುಳಿತುಕೊಳ್ಳಿ. ನಿಮ್ಮ ಇಷ್ಟಕ್ಕೆ ಎದ್ದು ಏನು ಬೇಕಾದರು ಹೇಳಬಹುದೆ? ಕೇಳಬೇಕಾದರೆ ಕನಿಷ್ಟವಾಗಿಯಾದರೂ ಕೇಳಬೇಕು. ದಯವಿಟ್ಟು ಕುಳಿತುಕೊಳ್ಳಿ. ಈ ರೀತೀಯಾಗಿ ಮಾತನಾಡುವುದಕ್ಕೆಲ್ಲಾ ಬರುವುದಿಲ್ಲ

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದ ಕಾರಜೋಳರವರು ಉಸ್ತುವಾರಿ ಸಚಿವರಾಗಿದ್ದಾರೆ. ಅಲ್ಲಿ ಎರಡೂವರೆ ವರ್ಷಗಳ

ಹಿಂದೆಯೇ ಜನಸ್ಪಂದನಾ ಕಾರ್ಯಕ್ರಮವಾಗಿತ್ತು. ಆದರೆ, ಇಲ್ಲಿಯವರೆಗೂ ಕೂಡ ಅದು ಆಗಿಲ್ಲ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಂಪಂಗಿಯವರೆ, ತಾವು ಕುಳಿತುಕೊಳ್ಳಿ. ಮಾತನಾಡುವುದಕ್ಕೆ ನೀವೇನಾದರೂ ಅನುಮತಿಯನ್ನು ತೆಗೆದುಕೊಂಡಿದ್ದೀರಾ? ಏನು ಬೇಕಾದರೂ ಕೇಳಬಹುದೆಂದು ತಿಳಿದುಕೊಂಡಿದ್ದೀರಾ?

ಶ್ರೀ ಎಂ.ಬಿ.ಪಾಟೀಲ್: ಜನಸ್ಪಂದನಾ ಕಾರ್ಯಕ್ರಮವಾಗಿ ಎರಡೂವರೆ ವರ್ಷಗಳಾಗಿವೆ. ಇದಾದ ಮೇಲೆ ಒಂದೊಂದು ಊರಿನಲ್ಲಿ ಸುಮಾರು 200 ರಿಂದ 300 ಅರ್ಜಿಗಳು ಬಂದಿವೆ. ಸುಮಾರು 2000 ದಿಂದ 3000 ಅರ್ಜಿಗಳು ಇಲ್ಲಿಯವರೆಗೂ ಕೂಡ ಪೆಂಡಿಂಗ್ ಇವೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಮಾನ್ಯ ಗೋವಿಂದ ಕಾರಜೋಳರವರು ಇಲ್ಲಿಯೇ ಇದ್ದಾರೆ. ಮಾನ್ಯ ಮುರುಗೇಶ್ ನಿರಾಣಿ ಸಾಹೇಬರು ಕೂಡ ಜನಸ್ಪಂದನ ಸಭೆಯನ್ನು ಮಾಡಿದ್ದರು.

ಅಧ್ಯಕ್ಷರು: ತಾವುಗಳು ವಿವರಗಳನ್ನು ಕೊಡಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ನೀವು ಜನರಲ್ ಆಗಿ ಹೇಳಿದರೆ ಹೇಗೆ?

ಶ್ರೀ ಎಂ.ಪಿ.ಪಾಟೀಲ್: ಜನರಲ್ ಆಗಿ ನಾನು ಹೇಳುತ್ತಿಲ್ಲ. ಬಬಲೇಶ್ವರದ ಬಗ್ಗೆ ನಾನು ಸ್ಪೆಸಿಫಿಕ್ ಆಗಿ ಹೇಳುತ್ತಿದ್ದೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಲಕ್ಷಾಂತರ ಜನರಿಗೆ ಕೊಡುತ್ತಿರುವ ಬಗ್ಗೆ ಅವರು ಸಂತೋಷ ಪಡಬೇಕು. ಮಾನ್ಯ ಸದಸ್ಯರ ಊರಿನಲ್ಲಿ ತೊಂದರೆಯಾಗಿದೆ ಎಂದು ಮತ್ತು ಇದರ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆಂದು ಸಹ ಹೇಳಿದ್ದಾರೆ. ಅವರು ಕಳುಹಿಸಿ ಕೊಡಲಿ ತಕ್ಷಣ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ.

ನೀರಾವರಿ ಅಚ್ಚುಕಟ್ಟು ಪ್ರದೇಶ

89 (795) ಶ್ರೀ ಪಾಟೀಲ್ .ಎ.ಎಸ್. (ನಡಹಳ್ಳಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನೀರಾವರಿ ಪ್ರದೇಶಗಳಲ್ಲಿ ಭೂಮಿಯ ಸವಳು ಜವಳು ತಪ್ಪಿಸಲು ನೀರಾವರಿ ಸಂಬಂಧಿಸಿದ ಕಾಲವೆಗಳ ಪಕ್ಕದಲ್ಲಿ ಡ್ರೈನೇಜ್